( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ಅಸಲು ದಾವೆ ನಂ.201/2019

ದಿನಾಂಕಃ 10-06-2024, ಪಿ ಡಬ್ಲ್ಯೂ–1

ಪಾಟೀ ಸವಾಲು ಃ ಶ್ರೀ ಎಸ್ ಪಿ ವಕೀಲರಿಂದಃ

ನಾನು ಮಲ್ಲಿಪಟ್ಟಣ ಹೋಬಳಿ, ಸುಣ್ಣದಕೊಪ್ಪಲಿನಲ್ಲಿ ಸುಮಾರು 7 ವರ್ಷಗಳಿಂದ ವಾಸ ಮಾಡುತ್ತಿದ್ದೇನೆ. ಸುಣ್ಣದ ಕೊಪ್ಪಲು ಗ್ರಾಮದಲ್ಲಿ ನಾನು ವಾಸ ಮಾಡುತ್ತಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ಗ್ರಾಮ ಪಂಚಾಯತಿಯ ಖಾತೆಯನ್ನು ಹಾಜರುಪಡಿಸಿ ದ್ದೇನೆ.

ನಾನು ಪ್ರತಿವಾದಿಯ ವಿರುದ್ಧ ದಾವೆಯನ್ನು ಯಾವ ಉದ್ದೇಶಕ್ಕಾಗಿ ಸಲ್ಲಿಸಿದ್ದೇನೆ ಎಂದು ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ಪ್ರತಿವಾದಿಯೇ ನನ್ನ ವಿರುದ್ಧ ದಾವೆಯನ್ನು ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಮೂಲತಃ ನನ್ನ ಅಣ್ಣನಿಗೆ ಸರ್ಕಾರದಿಂದ ಮಂಜೂರಾಗಿದ್ದು ನಂತರ ನನ್ನ ಅಣ್ಣನ ಮಗ ನನಗೆ ಬರೆದುಕೊಟ್ಟಿದ್ದಾರೆ. ನನ್ನ ಅಣ್ಣನ ಹೆಸರು ವೆಂಕಟಪ್ಪ. ನನ್ನ ಅಣ್ಣನಿಗೆ ದಾವಾ ಆಸ್ತಿ ಮಂಜೂರಾದ ಬಗ್ಗೆ ಮಂಜೂರಾತಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

ನನ್ನ ಗಂಡನ ಹೆಸರು ಜವರಪ್ಪ. ಜಯಮ್ಮ ಕೋಂ ಜವರಪ್ಪ ಶಿರಧನಹಳ್ಳಿ ಗ್ರಾಮ, ಮಲ್ಲಿಪಟ್ಟಣ ನಾನು ಎಂದರೆ ಸರಿ. ನಾನು ಶಿರಧನಹಳ್ಳಿ ಗ್ರಾಮದಲ್ಲಿ ವಾಸಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಶಿರಧನಹಳ್ಳಿ ಗ್ರಾಮದಲ್ಲಿ ನನಗೆ ಒಂದು ಮನೆ ಇದೆ ಎಂದರೆ ಸರಿಯಲ್ಲ. ಈಗ ನಾನು ದಾವಾ ಆಸ್ತಿಯಲ್ಲಿ ವಾಸ ಮಾಡುತ್ತಿದ್ದೇನೆ.

ನನ್ನ ಅಣ್ಣನ ಮಗ ಜಯಣ್ಣ ರವರು ನನಗೆ ದಾವಾ ಆಸ್ತಿಯನ್ನು ಬರೆದುಕೊಟ್ಟ ಬಗ್ಗೆ ನಾನು ದಾಖಲೆಯನ್ನು ಹಾಜರುಪಡಿಸಿದ್ದೇನೆ. ನನ್ನ ಅಣ್ಣನ ಮಗ ನನಗೆ ದಾನಪತ್ರ ಬರೆದುಕೊಟ್ಟಿದ್ದಾರೆ. ದಾವಾ ಆಸ್ತಿ ಗೋಮಾಳ ಜಾಗದಲ್ಲಿರುವ ಜಮೀನು ಎಂದರೆ ಸಾಕ್ಷಿಯು ಗೋಮಾಳ ಜಮೀನಿನಲ್ಲಿರುವ ನಿವೇಶನ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಸ್ವಾಮಣ್ಣ ರವರ ಹೊಲ, ಉತ್ತರಕ್ಕೆ ಪ್ರತಿವಾದಿಯ ಸ್ವಂತ ಜಾಗ, ದಕ್ಷಿಣಕ್ಕೆ ಕುಮಾರ ರವರ ಮನೆ ಇರುತ್ತದೆ. ದಾವಾ ಆಸ್ತಿಯ ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಗೋಮಾಳ ಜಾಗವಾಗಿದ್ದರಿಂದ ಯಾರೂ ಯಾರಿಗೆ ಬರೆದುಕೊಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಸರ್ಕಾರಿ ಗೋಮಾಳ ಜಾಗವಾಗಿದ್ದರಿಂದ ಸದರಿ ಜಾಗವನ್ನು ನಿವೇಶನಗಳಾಗಿ ಮಾರ್ಪಾಡು ಮಾಡಿ ಮಂಜೂರು ಮಾಡುವ ಯಾವುದೇ ಅಧಿಕಾರ ಗ್ರಾಮ ಪಂಚಾಯತಿಗೆ ಇಲ್ಲ ಎಂದರೆ

ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಅಕ್ರಮವಾಗಿ ಮನೆ ನಿರ್ಮಾಣ ಮಾಡುತ್ತಿದ್ದೇನೆ ಎಂದು ಗ್ರಾಮ ಲೆಕ್ಕಾಧಿಕಾರಿಗಳು ಮಾಡಿರುವ ವರದಿ ನನಗೆ ಗೊತ್ತು.

ನಾನು ಮನೆ ನಿರ್ಮಾಣ ಮಾಡಲು ಪಂಚಾಯತಿಯಿಂದ ಪರವಾನಿಗೆ ಪಡೆದಿದ್ದೇನೆ, ಸದರಿ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ರಘು ಎಂ.)
2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಅರಕಲಗೂಡು